# ಕರ್ನಾಟಕ ಲೋಕಾಯುಕ್ತ

ಸಂಖ್ಯೆ:ಉಪಲೋಕ್/ಎಂವೈಎಸ್-1219/2018/ಎಆರ್ಇ-6

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ:13/04/2022

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: 1) ಶ್ರೀ.ಎಂ.ಆರ್.ಮಂಜುನಾಥ್, ಕಾರ್ಯಪಾಲಕ ಅಭಿಯಂತರರು, ಕಾವೇರಿ ನೀರಾವರಿ ನಿಗಮ ನಿಯಮಿತ, ನಂ.2, ಕಬಿನಿ ನಾಲಾ ವಿಭಾಗ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಮತ್ತು 2) ಶ್ರೀ.ಗಿರಿಗೌಡ, ಕಾರ್ಯಪಾಲಕ ಅಭಿಯಂತರರು, ಕಾವೇರಿ ನೀರಾವರಿ ನಿಗಮ ನಿಯಮಿತ, ಕಬಿನಿ ನಾಲಾ ವಿಭಾಗ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ ರವರುಗಳು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

ಶ್ರೀ.ಕೆ.ಎಲ್.ಲಿಂಗರಾಜು ಬಿನ್ ಲೇಟ್ ಲಿಂಗನಾಯ್ಕ, ಕುಣಗಳ್ಳಿ ಗ್ರಾಮ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, 1) ಶ್ರೀ.ಎಂ.ಆರ್.ಮಂಜುನಾಥ್, ಕಾರ್ಯಪಾಲಕ ಅಭಿಯಂತರರು, ಕಾವೇರಿ ನೀರಾವರಿ ನಿಗಮ ನಿಯಮಿತ, ನಂ.2, ಕಬಿನಿ ನಾಲಾ ವಿಭಾಗ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಮತ್ತು 2) ಶ್ರೀ.ಡಿ.ಎಸ್.ಉಮೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾರ್ಯಪಾಲಕ ಅಭಿಯಂತರರ ಕಚೇರಿ, ಕಾವೇರಿ ನೀರಾವರಿ ನಿಗಮ ನಿಯಮಿತ, ನಂ.2, ಕಬಿನಿ ನಾಲಾ ವಿಭಾಗ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ (ಇನ್ನು ಮುಂದೆ '1 ಮತ್ತು 2ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2) ದೂರುದಾರರು ತಮ್ಮ ದೂರಿನಲ್ಲಿ, ಎದುರುದಾರರು 2014–15ನೇ ಸಾಲಿನಲ್ಲಿ ಒಂದೂವರೆ ಸಾವಿರ ಕೋಟಿ ರೂಪಾಯಿಗಳ ಕೆಲಸಗಳನ್ನು ಸಿವಿಲ್ ಗುತ್ತಿಗೆದಾರರಿಂದ ಮಾಡಿಸಿರುತ್ತಾರೆ. ಗುತ್ತಿಗೆದಾರರಿಂದ ಟಿ.ಡಿ.ಎಸ್/ಎಸ್.ಟಿ. ರೂಪಾಯಿಗಳನ್ನು ಕಟಾಯಿಸದೇ ಎದುರುದಾರರು ಕನಿಷ್ಠ ರೂ.6.00 ಲಕ್ಷಗಳನ್ನು ದುರುಪಯೋಗಪಡಿಸಿ ಸರ್ಕಾರಕ್ಕೆ ಮೋಸ ಮಾಡಿರುತ್ತಾರೆ. ತನಿಖೆ ಮಾಡಿ ರೂ.6.00 ಲಕ್ಷಗಳನ್ನು ಎದುರುದಾರರಿಂದ ವಸೂಲು ಮಾಡಿ ಸರ್ಕಾರದ ಖಜಾನೆಗೆ ಜಮಾ ಮಾಡಲು ಆದೇಶ ನೀಡಬೇಕೆಂದು ಕೋರಿದ್ದಾರೆ.

3) 1ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿ, ದೂರುದಾರರು ಮಾಹಿತಿ ಹಕ್ಕು ಕಾಯ್ದೆಯನ್ನು ಪಾರದರ್ಶಕವಾಗಿ ಉಪಯೋಗಿಸಿಕೊಳ್ಳದೆ ದೂರನ್ನು ಸಲ್ಲಿಸಿದ್ದಾರೆ. ದೂರುದಾರರ ಆಪಾದನೆಯಂತೆ ಸರ್ಕಾರದ ಕಾಮಗಾರಿ ನಿರ್ವಹಣೆಯಲ್ಲಿ ಅಥವಾ ಗುತ್ತಿಗೆದಾರರ ಬಿಲ್ಲುಗಳಲ್ಲಿ ಸರ್ಕಾರದ ಆದೇಶದಂತೆ ನಿಯಮಾನುಸಾರ ಟಿ.ಡಿ.ಎಸ್. ಮತ್ತು ಎಸ್.ಟಿ. ಯನ್ನು ಕಟಾವಣೆ ಮಾಡಿ ಜಮಾ ಮಾಡಲಾಗುತ್ತಿರುತ್ತದೆ. ಇದರಲ್ಲಿ ಯಾವುದೇ ಲೋಪ ಉಂಟಾಗಿರುವುದಿಲ್ಲ. ದೂರುದಾರರು ಎಲ್ಲಾ ಅರ್ಜಿಗಳಿಗೂ ಮಾಹಿತಿ ಒದಗಿಸಿದರೂ ಸಹ ಅಧಿಕಾರಿಗಳನ್ನು ಮಾಹಿತಿ ಆಯೋಗದ ಮುಂದೆ ರೇಗುತ್ತಾ, ಅಸಭ್ಯ ಪದವನ್ನು ಬಳಸುವುದು, ಮಾಹಿತಿಯು ಸಮಂಜಸವಾಗಿಲ್ಲವೆಂದು ವಾದಿಸುತ್ತಾರೆ ಹಾಗೂ ಸಾರ್ವಜನಿಕ ಹಿತಾಸಕ್ತಿಗಿಂತಲೂ ಹೆಚ್ಚಾಗಿ ತಮ್ಮ ವೈಯಕ್ತಿಕ ಹಿತಾಸಕ್ತಿಗಾಗಿ ಮಾಹಿತಿ ಕಾಯ್ದೆಯನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ತಾನು ದಿ:3–7–2015 ರಿಂದ 27–6–2018 ರವರೆಗೆ ಕಾರ್ಯಪಾಲಕ ಅಭಿಯಂತರರಾಗಿ, ಕಾ.ನೀ.ನಿ.ನಿ, ನಂ.2, ಕಬಿನಿ ನಾಲಾ ವಿಭಾಗ, ಕೊಳ್ಳೇಗಾಲ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಿರುವುದಾಗಿ ನಿವೇದಿಸಿಕೊಂಡಿದ್ದಾರೆ.

4) 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, ಒಟ್ಟು 72 ಕಾಮಗಾರಿಗಳ ಪೈಕಿ ಕಾಮಗಾರಿಗಳ ಶೀರ್ಷಿಕೆಯಡಿಯಲ್ಲಿ 31 ಕಾಮಗಾರಿಗಳನ್ನು ನಿರ್ವಹಿಸಲಾಗಿರುತ್ತದೆ ಎಂದು ಉಳಿದ ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿ ಹಾಗೂ ನಿಗಮದ ಅನುಮೋದನೆ ಆಗದೇ ಇರುವ ಕಾರಣ, ಸದರಿ ಕಾಮಗಾರಿಗಳನ್ನು ನಿರ್ವಹಿಸದೇ ಕೈಬಿಡಲಾಗಿರುತ್ತದೆ. ಸದರಿ ಕಾಮಗಾರಿಗಳಿಗೆ ವಿಭಾಗ ಕಚೇರಿಯಿಂದ ಟೆಂಡರ್ ಕರೆದು ವಿಭಾಗ ಕಚೇರಿಯಿಂದಲೇ ಕಾರ್ಯಾದೇಶವನ್ನು ನೀಡಲಾಗುತ್ತದೆ ಎಂದು, ಕಾಮಗಾರಿಗೆ ಸಂಬಂಧಿಸಿದ ಎಲ್ಲಾ ಬಿಲ್ಲುಗಳನ್ನು

ವಿಭಾಗ ಕಚೇರಿಯಿಂದಲೇ ಪಾಸು ಮಾಡಿ ಕಾಮಗಾರಿ ನಿರ್ವಹಿಸಲಾಗಿದ್ದು, ಮಾಹಿತಿಯನ್ನು ಕಾರ್ಯಪಾಲಕ ಅಭಿಯಂತರರು ನಂ.2, ಕಬಿನಿ ನಾಲಾ ವಿಭಾಗ, ಕೊಳ್ಳೇಗಾಲ ರವರಿಂದಲೇ ಪಡೆದುಕೊಳ್ಳಬೇಕೆಂದು ದೂರುದಾರರಿಗೆ ಮಾಹಿತಿ ಹಕ್ಕು ಕಾಯ್ದೆ ರೀತಿ ಮಾಹಿತಿ ನೀಡಲಾಗಿದೆ. ದಿ:16-11-2017 ರಂದು ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ನಂ.3, ಕಬಿನಿ ನಾಲಾ ಪರಿಶೀಲನಾ ಉಪ ವಿಭಾಗ, ಕೊಳ್ಳೇಗಾಲ, ಕಚೇರಿಯಲ್ಲಿ ಪ್ರಭಾರವನ್ನು ವಹಿಸಿಕೊಂಡು ಕರ್ತವ್ಯ ನಿರ್ವಹಿಸುತ್ತಿದ್ದು, 2014-15ನೇ ಸಾಲಿನಲ್ಲಿ ಸದರಿ ಕಚೇರಿಯಲ್ಲಿ ಕಾರ್ಯ ನಿರ್ವಹಿಸಿರುವುದಿಲ್ಲ ಎಂದು ನಿವೇದಿಸಿಕೊಂಡಿದ್ದಾರೆ.

5) 2014-15ನೇ ಸಾಲಿನ ಆಡಿಟ್ ವರದಿಯ ಪ್ರತಿಯನ್ನು ಕಳುಹಿಸಿಕೊಡುವಂತೆ ಕಾರ್ಯಪಾಲಕ ಅಭಿಯಂತರರು, ಕಾವೇರಿ ನೀರಾವರಿ ನಿಗಮ ನಿಯಮಿತ, ನಂ.2, ಕಬಿನಿ ನಾಲಾ ವಿಭಾಗ, ಕೊಳ್ಳೇಗಾಲ ರವರಿಗೆ ಸೂಚಿಸಲಾಯಿತು.

6) ಅದರಂತೆ, 1ನೇ ಎದುರುದಾರರು, 2012-13 ರಿಂದ 2016-17ನೇ ಸಾಲಿಗೆ ಸಂಬಂಧಪಟ್ಟ ಆಡಿಟ್ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ಕಂಡುಬಂದ ನ್ಯೂನತೆಗಳು ಏನಂದರೆ;

> ಕಬಿನಿ ಜಲ ನಾಲಾ ಸಿಸಿ ಲೈನಿಂಗ್ ಕಾಮಗಾರಿಗೆ ಕಾರ್ಯಾದೇಶವನ್ನು ದಿ:10-3-2015 ರಂದು ನೀಡಿದ್ದು, ಅನುಮೋದಿತ ಅಂದಾಜು ಪಟ್ಟಿಗಿಂತ 13.81% ಹೆಚ್ಚಿಗೆ ಮೊತ್ತಕ್ಕೆ ಗುತ್ತಿಗೆ ನೀಡಿರುತ್ತಾರೆ. 5 ತಿಂಗಳಿನಲ್ಲಿ ಕಾಮಗಾರಿ ಪೂರೈಸಬೇಕಿದ್ದು, 11 ತಿಂಗಳು ತಡಮಾಡಿ ಕಾರ್ಯ ನಿರ್ವಹಿಸಿ ರೂ.76.5 ಲಕ್ಷ ಹೆಚ್ಚಿನ ಮೊತ್ತ ಸರ್ಕಾರಕ್ಕೆ ಹೊರೆಯಾಗಿರುತ್ತದೆ. ಕಾಮಗಾರಿ ಕರಾರಿನ ಪ್ರಕಾರ ಆಗಸ್ಟ್ 2015 ರಂದು ಮುಕ್ತಾಯವಾಗಬೇಕಿದ್ದು, 11 ತಿಂಗಳು ತಡಮಾಡಿದ್ದರೂ ಯಾವುದೇ ದಂಡ ವಿಧಿಸದೆ ಅಗತ್ಯಕ್ಕೆ ಸರಿಯಾದ ಅಂದಾಜು ಪಟ್ಟಿಯನ್ನು ತಯಾರಿಸದೆ ಸರ್ಕಾರಕ್ಕೆ 76.5 ಲಕ್ಷ ಹೊರೆಯಾಗಿರುತ್ತದೆ. ಅಂದಾಜುಪಟ್ಟಿ ತಯಾರಿಸಿದ ಅವಧಿಯಲ್ಲಿ ಶ್ರೀ ಗಿರಿಗೌಡ ರವರು ಹಾಗೂ ಕಾಮಗಾರಿ ಕರಾರಿನ ಅವಧಿಯಲ್ಲಿ ಪೂರೈಸದೇ ಇದ್ದಾಗ ದಂಡ ವಸೂಲಿ ಮಾಡುವ ಅವಧಿಯಲ್ಲಿ 1ನೇ ಎದುರುದಾರರು

ಕರ್ತವ್ಯ ನಿರ್ವಹಿಸಿ ಕರ್ತವ್ಯಲೋಪ ಎಸಗಿರುವುದು ಕಂಡಬರುತ್ತದೆ. ಕೆ.ಆರ್.ಬಿ.ಸಿ. ಸಿ.ಸಿ. ಲೈನಿಂಗ್ ಕಾಮಗಾರಿ ಸಂಬಂಧ ಗುತ್ತಿಗೆದಾರರಿಂದ 1.87 ಕೋಟಿ ಬ್ಯಾಂಕ್ ಗ್ಯಾರಂಟಿ ಪಡೆದುಕೊಂಡಿದ್ದು, ಕಾಮಗಾರಿ ಸುಧಾರಣಾ ನಿರ್ವಹಣೆ ಅವಧಿ 5 ವರ್ಷಗಳಾಗಿದ್ದು, ದಿ:30-9-2019ಕ್ಕೆ ನಿರ್ವಹಣಾ ಅವಧಿ ಮುಕ್ತಾಯವಾಗುತ್ತದೆ. ಗುತ್ತಿಗೆದಾರರು ನೀಡಿದ ಬ್ಯಾಂಕ್ ಗ್ಯಾರಂಟಿ ಮೊತ್ತ ದಿ:30-9-2019 ರವರೆಗೆ ನಿಗಮದಲ್ಲಿ ಕಾಯ್ದಿರಿಸಬೇಕಿದ್ದು, ದಿ:30-6-2015ಕ್ಕೆ ಗುತ್ತಿಗೆದಾರರಿಗೆ ಹಿಂದಿರುಗಿಸಿ ಗುತ್ತಿಗೆ ಕರಾರು ನಿಯಮವನ್ನು ಕಾರ್ಯನಿರ್ವಾಹಕ ಅಭಿಯಂತರರು ಉಲ್ಲಂಘಿಸಿದ್ದಾರೆ. ದಿ:30-6-2015 ರಲ್ಲಿ ಕರ್ತವ್ಯ ನಿರ್ವಹಿಸಿದ ಕಾರ್ಯನಿರ್ವಾಹಕ ಅಭಿಯಂತರರಾದ ಶ್ರೀ.ಕೆ.ಎಂ.ಮರಿಸ್ವಾಮಿ ಕರ್ತವ್ಯಲೋಪ ಎಸಗಿರುವುದು ಕಂಡುಬಂದಿರುತ್ತದೆ. ಸಿ.ಸಿ. ಲೈನಿಂಗ್ ಡಿ.ಜೆ. ಅಣೆಕಟ್ಟು ಚಾನಲ್ ಕಾಮಗಾರಿ ಮುಕ್ತಾಯ ಮಾಡಲು ಅತಿ ವಿಳಂಬ ಮಾಡಿದ್ದು, ಹೆಚ್ಚುವರಿ ವೆಚ್ಚ ರೂ.62.50 ಲಕ್ಷ ಸರ್ಕಾರಕ್ಕೆ ಹೊರೆಯಾಗಿರುತ್ತದೆ. ಕಾಮಗಾರಿಯನ್ನು ನಿರ್ವಹಿಸಲು ಸ್ಥಳವನ್ನು ಗುತ್ತಿಗೆದಾರರಿಗೆ ದಿ:7-2-2014 ರಂದು ವಹಿಸಿದ್ದು, ದಿ:17-6-2014 ರಂದು ಕಾಮಗಾರಿ ಪೂರೈಸಬೇಕಿದ್ದು, ಜುಲೈ 2016ಕ್ಕೆ ಕಾಮಗಾರಿ ಪೂರೈಸಿರುತ್ತಾರೆ. 4 ತಿಂಗಳು ಮಾತ್ರ ವಿಸ್ತರಣೆ ಕೋರಿ ಗುತ್ತಿಗೆದಾರರು ಅರ್ಜಿ ನೀಡಿರುತ್ತಾರೆ. ಕಾಮಗಾರಿ ನಿರ್ವಹಣೆ ವಿಸ್ತರಣೆ ಅವಧಿ ನಂತರ ಅಕ್ಟೋಬರ್ 2014ಕ್ಕೆ ಪೂರೈಸಬೇಕಿದ್ದು, ನಿಗದಿತ ಅವಧಿಯಲ್ಲಿ ಪೂರೈಸದೆ ಇರುವುದು ಕಂಡುಬರುತ್ತದೆ. ಅಕ್ಟೋಬರ್ 2014 ರಿಂದ 2016ರ ವರೆಗೆ ಕಾರ್ಯನಿರ್ವಾಹಕ ಅಭಿಯಂತರರಾದ ಶ್ರೀ.ಕೆ.ಎಂ.ಮರಿಸ್ವಾಮಿ, ಗಿರಿಗೌಡ ಹಾಗೂ 1ನೇ ಎದುರುದಾರರು ಕರ್ತವ್ಯ ನಿರ್ವಹಿಸಿದ್ದು, ನಿಯಮಾನುಸಾರ ಕ್ರಮ ಜರುಗಿಸದೇ ಕರ್ತವ್ಯ ಲೋಪ ಎಸಗಿರುವುದು ಕಂಡುಬಂದಿರುತ್ತದೆ.

ಕಾ.ನೀ.ನಿ.ನಿ. ಕ್ಕೆ ಬರಬೇಕಿದ್ದ ಬಾಕಿ 17.68 ಕೋಟಿ ಇದ್ದು, 2011-12 ರಿಂದ ಬಾಕಿ ಮುಂದುವರಿಸಿಕೊಂಡು ಬಂದಿದ್ದು, ವಸೂಲಾತಿಗೆ ಯಾವುದೇ ಕ್ರಮ ಜರುಗಿಸಿಲ್ಲ ಎಂದು, ಸದರಿ ಮೊತ್ತವನ್ನು ಆರ್ಥಿಕ ತ:ಖ್ತೆಯಲ್ಲಿ

ತೋರಿಸಿರುವುದಿಲ್ಲ. ಜಿ.ಎಸ್.ಟಿ. ಕಾಯಿದೆಯು ದಿ:1-7-2017ಕ್ಕೆ ಜಾರಿಗೆ ಬಂದಿದ್ದು, ಈವರೆಗೂ ಜಿಎಸ್‌ಟಿ ನೋಂದಣಿ ಮಾಡದ ಕಾರಣ ಆಗಸ್ಟ್ 2017 ರಿಂದ ಜನವರಿ 2018 ರವರೆಗೆ ಗುತ್ತಿಗೆದಾರರಿಂದ ವಸೂಲು ಮಾಡಿದ ಕರ ಒಟ್ಟು 31.58 ಲಕ್ಷ ಹಣವನ್ನು ಸರ್ಕಾರಕ್ಕೆ ಪಾವತಿಸಿರುವುದಿಲ್ಲ. ಕರವನ್ನು ಕಡಿತ ಮಾಡಿದ 10 ದಿನಗಳಲ್ಲಿ ಸರ್ಕಾರಕ್ಕೆ ಪಾವತಿಸಬೇಕಿದ್ದು, ಈವರೆಗೂ ಪಾವತಿಸಿರುವುದಿಲ್ಲ. ಜಿ.ಎಸ್.ಟಿ. ಕಾಯ್ದೆ ಬಂದ ನಂತರವೂ ಕೆ.ಎಸ್.ಟಿ. (VAT) ಕಾಯ್ದೆ ರೀತ್ಯಾ ಕರ ಕಡಿತ ಮಾಡುತ್ತಿದ್ದಾರೆ. ಆಗಸ್ಟ್ 2017 ರಿಂದ ಜನವರಿ 2018 ರವರೆಗೆ ಗುತ್ತಿಗೆದಾರರಿಂದ ವಸೂಲಿ ಮಾಡಿದ ಕರ 31.58 ಲಕ್ಷ ರೂ.ಗಳನ್ನು ಸರ್ಕಾರಕ್ಕೆ ಪಾವತಿಸದೇ ಜಿ.ಎಸ್.ಟಿ. ನೋಂದಣಿ ಮಾಡಿಸದೇ ಸದರಿ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿದ ಕಾರ್ಯನಿರ್ವಾಹಕ ಅಭಿಯಂತರರಾದ 1ನೇ ಎದುರುದಾರರು ಕರ್ತವ್ಯ ಲೋಪ ಎಸಗಿದ್ದಾರೆ.

2012-13ನೇ ಸಾಲಿನಿಂದ 2016-17ನೇ ಸಾಲಿನಲ್ಲಿ ಬಂದ ಒಟ್ಟು ಅನುದಾನದಲ್ಲಿ 42.52 ಕೋಟಿ ಅನುದಾನವನ್ನು ಅಭಿವೃದ್ಧಿ ಕಾರ್ಯಗಳಿಗೆ ಬಳಸದೆ ಸರ್ಕಾರದ ಹಣ ವ್ಯರ್ಥಮಾಡಿದ್ದು, ಸಾಮಾಜಿಕ ಉದ್ದೇಶಗಳಿಗೆ ಬಳಸಲು ಸೂಚಿಸಿರುತ್ತಾರೆ. ಕಾ.ನೀ.ನಿ.ನಿ. ಅಸ್ತಿತ್ವಕ್ಕೆ ಬಂದ ನಂತರ ನೀರಾವರಿ ಇಲಾಖೆಯಲ್ಲಿದ್ದ 2.47 ಕೋಟಿ ಠೇವಣಿ ಮೊತ್ತವನ್ನು ಕಾ.ನೀ.ನಿ.ನಿ.ಕ್ಕೆ ವರ್ಗಾವಣೆ ಮಾಡಿರುವುದಿಲ್ಲ ಎಂದು, ಸರ್ಕಾರಕ್ಕೆ ವಸೂಲು ಮಾಡಬೇಕಾದ ಮೊತ್ತ 1.90 ಕೋಟಿ ಇದ್ದು, ವಸೂಲಿಗೆ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ನಗದು ಪುಸ್ತಕ ಹಾಗೂ ಬ್ಯಾಂಕ್ ರಿಕನ್ಸಿಲಿಯೇಷನ್ ಸ್ಟೇಟ್‌ಮೆಂಟ್‌ಗಳನ್ನು ನಿಯಮಾನುಸಾರ ನಿರ್ವಹಿಸಿರುವುದಿಲ್ಲ. ಸ್ಟಾಕ್ ಪುಸ್ತಕದಲ್ಲಿರುವ 2.51 ಲಕ್ಷ ಸರಕುಗಳನ್ನು ಬಳಸದೇ ಪುಸ್ತಕವನ್ನು ನಿಯಮಾನುಸಾರ ನಿರ್ವಹಿಸದೇ, ಭೌತಿಕ ತಪಾಸಣೆಯನ್ನು 2014ನೇ ಸಾಲಿನಲ್ಲಿ ನಿರ್ವಹಿಸಿ ನಂತರ ತಪಾಸಣೆ ಮಾಡದೆ ನಿಯಮಗಳನ್ನು ಉಲ್ಲಂಘಿಸಿದ್ದಾರೆ.

7) ಮಹಾಲೇಖಪಾಲರ ಆಡಿಟ್ ವರದಿಯಲ್ಲಿ ನಮೂದಿಸಿರುವ ನ್ಯೂನತೆಗಳ ಅವಧಿಯಲ್ಲಿ ಶ್ರೀ.ಗಿರಿ ಗೌಡ ಮತ್ತು ಶ್ರೀ.ಕೆ.ಎಂ.ಮರಿಸ್ವಾಮಿ ಕಾರ್ಯನಿರ್ವಹಿಸಿರುವುದು ಕಂಡುಬಂದಿದ್ದರಿಂದ, ಸದರಿ ಶ್ರೀ.ಗಿರಿ ಗೌಡ ಮತ್ತು ಶ್ರೀ.ಕೆ.ಎಂ.ಮರಿಸ್ವಾಮಿ ರವರುಗಳನ್ನು 3 ಮತ್ತು 4ನೇ ಎದುರುದಾರರನ್ನಾಗಿ ಸೇರಿಸಿಕೊಂಡು, ಸದರಿಯವರುಗಳಿಂದ ಆಕ್ಷೇಪಣೆಗಳನ್ನು ಕೇಳಲಾಯಿತು.

8) 3ನೇ ಎದುರುದಾರರು ದಿ:8–9–2020ರ ತಮ್ಮ ಆಕ್ಷೇಪಣೆಯಲ್ಲಿ, ಮಹಾಲೇಖಪಾಲರ ಆಡಿಟ್ ವರದಿಗೆ ಸಲ್ಲಿಸಿರುವ ಉತ್ತರಗಳಲ್ಲಿ ಕೆಲವು ಬೆರಳಚ್ಚು ದೋಷಗಳಿದ್ದು, ಸದರಿ ದೋಷಗಳನ್ನು ಸರಿಪಡಿಸಿ ಸಲ್ಲಿಸುತ್ತಿದ್ದು, ದೂರುದಾರರ ದೂರಿಗೆ ಸಂಬಂಧಪಟ್ಟಂತೆ ಮಾರಾಟ ತೆರಿಗೆ ಮೊತ್ತವನ್ನು ಸರ್ಕಾರ ನಿಗದಿಪಡಿಸಿರುವ ಧರದಂತೆ ಕಟಾಯಿಸಿ ಸಂಬಂಧಪಟ್ಟ ಇಲಾಖೆಗೆ ಪಾವತಿಸಲಾಗಿದ್ದು, ದೂರುದಾರರು ಮಾಡಿರುವ ಆರೋಪವು ಸತ್ಯಕ್ಕೆ ದೂರವಾಗಿದೆ. ಅನುಪಾಲನಾ ವರದಿ ಸಲ್ಲಿಸಿದ ನಂತರ ಮಹಾಲೇಖಪಾಲರು 6 ಕಂಡಿಕೆಗಳಿಗೆ ಅನುಪಾಲನಾ ವರದಿಯನ್ನು ಒಪ್ಪಿಕೊಂಡು ಕೈಬಿಟ್ಟಿದ್ದಾರೆ ಎಂದು ನಿವೇದಿಸಿಕೊಂಡಿದ್ದಾರೆ.

9) 3ನೇ ಎದುರುದಾರರು ದಿ:14–11–2020ರ ತಮ್ಮ ಮುಂದುವರೆದ ಆಕ್ಷೇಪಣೆಯಲ್ಲಿ, ತಾನು ದಿ:9–10–2013 ರಿಂದ 9–10–2014ರ ವರೆಗೆ, ದಿ:12–1–2015 ರಿಂದ 30–4–2015 ರವರೆಗೆ ಕಾರ್ಯನಿರ್ವಹಿಸಿದ್ದು, ದಿ:30–4–2015 ರಂದು ವಯೋ ನಿವೃತ್ತಿ ಹೊಂದಿದ್ದು, ಮಹಾಲೇಖಪಾಲರು ನಿವೃತ್ತಿ ವೇತನ ಪಡೆಯುವ ಸಂಬಂಧ ತನ್ನ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಅಥವಾ ವಿಚಾರಣೆ ನಡೆಸಲು ಉದ್ದೇಶಿಸಲಾಗಿದೆಯೇ ಅಥವಾ ತನ್ನಿಂದ ಸರ್ಕಾರಕ್ಕೆ ಸಲ್ಲಬೇಕಾದ ಬಾಕಿ, ಸದರಿ ವಿಷಯಗಳನ್ನು ಪರಿಶೀಲಿಸಿದ ನಂತರ ಮೇಲಾಧಿಕಾರಿಗಳ ಅನುಮೋದನೆ ನಂತರ ನಿವೃತ್ತಿ ಸೌಲಭ್ಯವನ್ನು ನೀಡಿರುತ್ತಾರೆ. ತಾನು ಕೆಲಸ ನಿರ್ವಹಿಸಿದ ಸಮಯದಲ್ಲಿ ಯಾವುದೇ ಕರ್ತವ್ಯ ಲೋಪವಾಗಿರುವುದು ಕಂಡುಬರುವುದಿಲ್ಲ. ತಾನು ದಿ:30–4–2015 ರಂದು ನಿವೃತ್ತಿಯಾಗಿರುವುದರಿಂದ ಕೆ.ಸಿ.ಎಸ್.ಆರ್. ನಿಯಮ 214(2)(ಬಿ)(i)(ii) ರಂತೆ ಯಾವುದೇ ದೋಷಾರೋಪಣೆ ಹೊರಿಸಲು ಬರುವುದಿಲ್ಲ ಹಾಗೂ ತನಿಖೆ ಮಾಡಲು ಬರುವುದಿಲ್ಲವೆಂದು ನಿವೇದಿಸಿಕೊಂಡಿದ್ದಾರೆ.

10) 4ನೇ ಎದುರುದಾರರು ದಿ:8–9–2020ರ ತಮ್ಮ ಆಕ್ಷೇಪಣೆಯಲ್ಲಿ, ಮಹಾಲೇಖಪಾಲರ ಆಡಿಟ್ ವರದಿಗೆ ಸಲ್ಲಿಸಿರುವ ಉತ್ತರಗಳಲ್ಲಿ ಕೆಲವು ಬೆರಳಚ್ಚು ದೋಷಗಳಿದ್ದು, ಸದರಿ ದೋಷಗಳನ್ನು ಸರಿಪಡಿಸಿ ಸಲ್ಲಿಸುತ್ತಿದ್ದು, ದೂರುದಾರರ ದೂರಿಗೆ ಸಂಬಂಧಪಟ್ಟಂತೆ ಮಾರಾಟ ತೆರಿಗೆ ಮೊತ್ತವನ್ನು ಸರ್ಕಾರ ನಿಗದಿಪಡಿಸಿರುವ ಧರದಂತೆ ಕಟಾಯಿಸಿ ಸಂಬಂಧಪಟ್ಟ ಇಲಾಖೆಗೆ ಪಾವತಿಸಲಾಗಿದ್ದು, ದೂರುದಾರರು ಮಾಡಿರುವ ಆರೋಪವು ಸತ್ಯಕ್ಕೆ ದೂರವಾಗಿದೆ. ಅನುಪಾಲನಾ ವರದಿ ಸಲ್ಲಿಸಿದ ನಂತರ ಮಹಾಲೇಖಪಾಲರು 6 ಕಂಡಿಕೆಗಳಿಗೆ ಅನುಪಾಲನಾ ವರದಿಯನ್ನು ಒಪ್ಪಿಕೊಂಡು ಕೈಬಿಟ್ಟಿದ್ದಾರೆ ಎಂದು ನಿವೇದಿಸಿಕೊಂಡಿದ್ದಾರೆ.

11) ದೂರುದಾರರು ದಿ:22–1–2021ರ ತಮ್ಮ ಪ್ರತ್ಯುತ್ತರದಲ್ಲಿ, ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯು ಸುಳ್ಳಿನಿಂದ ಕೂಡಿರುತ್ತದೆ. ಎದುರುದಾರರ ವಿರುದ್ಧ ನ್ಯಾಯಾಲಯದಲ್ಲಿ ಎಫ್.ಐ.ಆರ್. ದಾಖಲಿಸಿದ್ದು, 3 ಜನ ಅಧಿಕಾರಿಗಳು ಸುಳ್ಳು ದಾಖಲೆಗಳನ್ನು ಸಲ್ಲಿಸಿದ್ದಾರೆ. ಸಿವಿಲ್ ಗುತ್ತಿಗೆದಾರರಿಂದ ವಾಣಿಜ್ಯ ತೆರಿಗೆ ಇಲಾಖೆಗೆ ಎಸ್.ಟಿ.ಟಿ.ಡಿ.ಎಸ್. ರೂ.ಗಳನ್ನು ನಮೂನೆ–156 ರಲ್ಲಿ ಅಥವಾ ಡಿ.ಡಿ. ಮುಖಾಂತರ ಕೊಳ್ಳೇಗಾಲ ತಾಲ್ಲೂಕಿನ ವಾಣಿಜ್ಯ ತೆರಿಗೆ ಇಲಾಖೆಗೆ ಸಂದಾಯ ಮಾಡಿರುವ ಚಲನ್‌ಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ, ಅಧಿಕಾರಿಗಳ ವಿರುದ್ಧ ಸೂಕ್ತ ತನಿಖೆ ಮಾಡಬೇಕೆಂದು ಕೋರಿದ್ದಾರೆ.

12) ಕಡತವನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, 1, 3 ಮತ್ತು 4ನೇ ಎದುರುದಾರರ ಅವಧಿಯಲ್ಲಿ, ಕಬಿನಿ ಜಲ ನಾಲಾ ಸಿಸಿ ಲೈನಿಂಗ್ ಕಾಮಗಾರಿಗೆ ಕಾರ್ಯಾದೇಶವನ್ನು ದಿ:10–3–2015 ರಂದು ನೀಡಿದ್ದು, ಅನುಮೋದಿತ ಅಂದಾಜು ಪಟ್ಟಿಗಿಂತ 13.81% ಹೆಚ್ಚಿಗೆ ಮೊತ್ತಕ್ಕೆ ಗುತ್ತಿಗೆ ನೀಡಿರುತ್ತಾರೆ. 5 ತಿಂಗಳಿನಲ್ಲಿ ಕಾಮಗಾರಿ ಪೂರೈಸಬೇಕಿದ್ದು, 11 ತಿಂಗಳು ತಡಮಾಡಿ ಕಾರ್ಯ ನಿರ್ವಹಿಸಿದ್ದು ರೂ.76.5 ಲಕ್ಷ ಹೆಚ್ಚಿನ ಮೊತ್ತ ಸರ್ಕಾರಕ್ಕೆ ಹೊರೆಯಾಗಿರುತ್ತದೆ. ತಡಮಾಡಿದ್ದರೂ ಗುತ್ತಿಗೆದಾರರ ಮೇಲೆ ಯಾವುದೇ ದಂಡ ವಿಧಿಸಿಲ್ಲ ಮತ್ತು ತಡಮಾಡಿದ್ದಕ್ಕಾಗಿ ಸಕಾರಣಗಳನ್ನು ಹೇಳಿಲ್ಲ.

13) ಕೆ.ಆರ್.ಬಿ.ಸಿ. ಸಿ.ಸಿ. ಲೈನಿಂಗ್ ಕಾಮಗಾರಿ ಸಂಬಂಧ ಗುತ್ತಿಗೆದಾರರಿಂದ 1.87 ಕೋಟಿ ಬ್ಯಾಂಕ್ ಗ್ಯಾರಂಟಿ ಪಡೆದುಕೊಂಡಿದ್ದು, ಕಾಮಗಾರಿ ಸುಧಾರಣಾ ನಿರ್ವಹಣೆ ಅವಧಿ 5

ವರ್ಷಗಳಾಗಿದ್ದು, ದಿ:30-9-2019ಕ್ಕೆ ನಿರ್ವಹಣಾ ಅವಧಿ ಮುಕ್ತಾಯವಾಗಿರುತ್ತದೆ. ಗುತ್ತಿಗೆದಾರರು ನೀಡಿದ ಬ್ಯಾಂಕ್ ಗ್ಯಾರಂಟಿ ಮೊತ್ತ ದಿ:30-9-2019 ರವರೆಗೆ ನಿಗಮದಲ್ಲಿ ಕಾಯ್ದಿರಿಸಬೇಕಿದ್ದು, ಆದರೆ, ದಿ:30-6-2015ಕ್ಕೆ ಗುತ್ತಿಗೆದಾರರಿಗೆ ಹಿಂದಿರುಗಿಸಿ ಗುತ್ತಿಗೆ ಕರಾರು ನಿಯಮವನ್ನು ಕಾರ್ಯನಿರ್ವಾಹಕ ಅಭಿಯಂತರರಾದ 4ನೇ ಎದುರುದಾರ ಶ್ರೀ.ಕೆ.ಮರಿಸ್ವಾಮಿ ಉಲ್ಲಂಘಿಸಿದ್ದಾರೆ. ಸಿ.ಸಿ. ಲೈನಿಂಗ್ ಡಿ.ಜೆ. ಅಣೆಕಟ್ಟು ಚಾನಲ್ ಕಾಮಗಾರಿ ಮುಕ್ತಾಯ ಮಾಡಲು ಅತಿ ವಿಳಂಬ ಮಾಡಿದ್ದು, ಹೆಚ್ಚುವರಿ ವೆಚ್ಚ ರೂ.62.50 ಲಕ್ಷ ಸರ್ಕಾರಕ್ಕೆ ಹೊರೆಯಾಗಿರುತ್ತದೆ. ಇದಕ್ಕೆ 1, 3 ಮತ್ತು 4ನೇ ಎದುರುದಾರರು ಹೊಣೆಗಾರರಾಗಿದ್ದಾರೆ. ಕಾ.ನೀ.ನಿ.ನಿ.ಕ್ಕೆ ಬರಬೇಕಿದ್ದ ಬಾಕಿ 17.68 ಕೋಟಿ ಇದ್ದು, 2011-12 ರಿಂದ ಬಾಕಿ ಮುಂದುವರಿಸಿಕೊಂಡು ಬಂದಿದ್ದು, ವಸೂಲಾತಿಗೆ 1, 3 ಮತ್ತು 4ನೇ ಎದುರುದಾರರು ಯಾವುದೇ ಕ್ರಮ ಜರುಗಿಸಿಲ್ಲ ಮತ್ತು ಸದರಿ ಮೊತ್ತವನ್ನು ಆರ್ಥಿಕ ತ:ಖ್ತೆಯಲ್ಲಿ ತೋರಿಸಿರುವುದಿಲ್ಲ.

14) ಜಿ.ಎಸ್.ಟಿ. ಕಾಯಿದೆಯು ದಿ:1-7-2017ಕ್ಕೆ ಜಾರಿಗೆ ಬಂದಿದ್ದು, ಈವರೆಗೂ ಜಿಎಸ್‌ಟಿ ನೋಂದಣಿ ಮಾಡದ ಕಾರಣ ಆಗಸ್ಟ್ 2017 ರಿಂದ ಜನವರಿ 2018 ರವರೆಗೆ ಗುತ್ತಿಗೆದ್ದಾರರಿಂದ ವಸೂಲು ಮಾಡಿದ ಕರ ಒಟ್ಟು 31.58 ಲಕ್ಷ ಹಣವನ್ನು ಸರ್ಕಾರಕ್ಕೆ ಪಾವತಿಸಿರುವುದಿಲ್ಲ. ಕರವನ್ನು ಕಡಿತ ಮಾಡಿದ 10 ದಿನಗಳಲ್ಲಿ ಸರ್ಕಾರಕ್ಕೆ ಪಾವತಿಸಬೇಕಿದ್ದು, ಈವರೆಗೂ ಪಾವತಿಸಿರುವುದಿಲ್ಲ. ಸಿ.ಜಿ.ಎಸ್.ಟಿ. ಮತ್ತು ಕೆ.ಜಿ.ಎಸ್.ಟಿ. ಪ್ರಕಾರ ಕರ ಕಡಿತ ಮಾಡಬೇಕಾಗಿದ್ದರೂ ಸಹ ಕೆ.ಎಸ್.ಟಿ. (VAT) ಕಾಯ್ದೆ ರೀತ್ಯಾ ಕರ ಕಡಿತ ಮಾಡುತ್ತಿದ್ದಾರೆ. ಆಗಸ್ಟ್ 2017 ರಿಂದ ಜನವರಿ 2018 ರವರೆಗೆ ಗುತ್ತಿಗೆದಾರರಿಂದ ವಸೂಲಿ ಮಾಡಿದ ಕರ 31.58 ಲಕ್ಷ ರೂ.ಗಳನ್ನು ಸರ್ಕಾರಕ್ಕೆ ಪಾವತಿಸದೇ ಜಿ.ಎಸ್.ಟಿ. ನೋಂದಣಿ ಮಾಡಿಸದೇ ಸದರಿ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿದ ಕಾರ್ಯನಿರ್ವಾಹಕ ಅಭಿಯಂತರರಾದ 1ನೇ ಎದುರುದಾರರು ಕರ್ತವ್ಯ ಲೋಪ ಎಸಗಿದ್ದಾರೆ.

15) 2012-13ನೇ ಸಾಲಿನಿಂದ 2016-17ನೇ ಸಾಲಿನಲ್ಲಿ ಬಂದ ಒಟ್ಟು ಅನುದಾನದಲ್ಲಿ 42.52 ಕೋಟಿ ಅನುದಾನವನ್ನು ಅಭಿವೃದ್ಧಿ ಕಾರ್ಯಗಳಿಗೆ ಬಳಸದೆ ಸರ್ಕಾರದ ಹಣ ವ್ಯರ್ಥಮಾಡಿದ್ದಾರೆ. ಕಾ.ನೀ.ನಿ.ನಿ. ಅಸ್ತಿತ್ವಕ್ಕೆ ಬಂದ ನಂತರ ನೀರಾವರಿ ಇಲಾಖೆಯಲ್ಲಿದ್ದ 2.47

ಕೋಟಿ ಠೇವಣಿ ಮೊತ್ತವನ್ನು ಕಾ.ನೀ.ನಿ.ನಿ.ಕ್ಕೆ ವರ್ಗಾವಣೆ ಮಾಡಿರುವುದಿಲ್ಲ, ಸರ್ಕಾರಕ್ಕೆ ವಸೂಲು ಮಾಡಬೇಕಾದ ಮೊತ್ತ 1.90 ಕೋಟಿ ಇದ್ದು, ವಸೂಲಿಗೆ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ನಗದು ಪುಸ್ತಕ ಹಾಗೂ ಬ್ಯಾಂಕ್ ರೀಕನ್ಸಿಲಿಯೇಷನ್ ಸ್ಟೇಟ್‌ಮೆಂಟ್‌ಗಳನ್ನು ನಿಯಮಾನುಸಾರ ನಿರ್ವಹಿಸಿರುವುದಿಲ್ಲ ಮತ್ತು ಸ್ಟಾಕ್ ಪುಸ್ತಕದಲ್ಲಿರುವ 2.51 ಲಕ್ಷ ಸರಕುಗಳನ್ನು ಬಳಸದೇ ಪುಸ್ತಕವನ್ನು ನಿಯಮಾನುಸಾರ ನಿರ್ವಹಿಸದೇ, ಭೌತಿಕ ತಪಾಸಣೆಯನ್ನು 2014ನೇ ಸಾಲಿನಲ್ಲಿ ನಿರ್ವಹಿಸಿ ನಂತರ ತಪಾಸಣೆ ಮಾಡದೆ ನಿಯಮಗಳನ್ನು ಉಲ್ಲಂಘಿಸಿದ್ದಾರೆ.

16) ಆಡಿಟ್ ವರದಿಯ ಪ್ರಕಾರ 2ನೇ ಎದುರುದಾರರು ಮೇಲ್ಕಂಡ ನ್ಯೂನತೆಗಳಿಗೆ ಜವಾಬ್ಧಾರರಲ್ಲ. 4ನೇ ಎದುರುದಾರರು ದಿ:30-4-2015 ರಂದು ನಿವೃತ್ತಿ ಹೊಂದಿದ್ದಾರೆ. ಆದ್ದರಿಂದ, 2 ಮತ್ತು 4ನೇ ಎದುರುದಾರರನ್ನು ಈ ಪ್ರಕರಣದಿಂದ ಕೈಬಿಡಬಹುದಾಗಿದೆ.

17) ಮೇಲೆ ಚರ್ಚಿಸಿದ ಕಾರಣಗಳ ಹಿನ್ನಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1)(ii) ಮತ್ತು (iii) ರನ್ವಯ 1 ಮತ್ತು 3ನೇ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, 1ನೇ ಎದುರುದಾರ ಶ್ರೀ.ಎಂ.ಆರ್.ಮಂಜುನಾಥ್, ಕಾರ್ಯಪಾಲಕ ಅಭಿಯಂತರರು, ಕಾವೇರಿ ನೀರಾವರಿ ನಿಗಮ ನಿಯಮಿತ, ನಂ.2, ಕಬಿನಿ ನಾಲಾ ವಿಭಾಗ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಮತ್ತು 3ನೇ ಎದುರುದಾರ ಶ್ರೀ.ಗಿರಿಗೌಡ, ಕಾರ್ಯಪಾಲಕ ಅಭಿಯಂತರರು, ಕಾವೇರಿ ನೀರಾವರಿ ನಿಗಮ ನಿಯಮಿತ, ಕಬಿನಿ ನಾಲಾ ವಿಭಾಗ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಇವರುಗಳ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಹಾಗೂ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

18) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

12/4/22

**[ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ]**
**ಉಪಲೋಕಾಯುಕ್ತರು-2,**
**ಕರ್ನಾಟಕ ರಾಜ್ಯ, ಬೆಂಗಳೂರು.**